UASB Library
Newspaper Clippings
Friday 22-07-2022 Pg .1
Jai Kisan

ಕೃಷಿ ಭೂಮಿಯಲ್ಲಿ ತಲೆ ಎತ್ತಿರುವ ವಿಚಿತ್ರ ಸಸ್ಯ । ಮೇವಿಗೂ ಉಪಯೋಗವಿಲ್ಲ

ಅನ್ನದಾತರ ನಿದ್ದೆಗೆಡಿಸಿರುವ ಧನಲಕ್ಷ್ಮೀ!

■ ಆರ್. ಶ್ರೀನಿವಾಸ್ ಉಳ್ಳಾವಳ್ಳಿ ಚನ್ನರಾಯಪಟ್ಟಣ ತಾಲೂಕಿನ ಗಡಿಭಾಗದ ಕೆಲ ಗ್ರಾಮಗಳ ವ್ಯಾಪ್ತಿಯ ತೆಂಗಿನತೋಟ ಹಾಗೂ ಕೃಷಿ ಜಮೀನಿನಲ್ಲಿ ಸಸ್ಯ ಪ್ರಬೇಧವೊಂದು (ಧನಲಕ್ಷ್ಮೀ ಸಸ್ಯ) ಹೇರಳವಾಗಿ ಬೆಳೆದಿದ್ದು, ಇದರ ಕಾಟದಿಂದ ರೈತರು ಹೈರಾಣಾಗಿದ್ದಾರೆ. ತೋಟ ಹಾಗೂ ಕೃಷಿ ಜಮೀನಿನ ಬದುಗಳಲ್ಲಿ ಗರಿಕೆ, ಅಂಚಿ ಹುಲ್ಲು, ನೆಲ ನೇರಳೆ ಸೇರಿ ಇತರ ಮೇವಿನ ಸಸ್ಯಗಳು ಬೆಳೆಯುವುದು ಸಹಜ. ಇವು ಜಾನುವಾರುಗಳ ಮೇವಿಗೂ ಅನುಕೂಲಕಾರಿ. ಆದರೆ ಇತ್ತೀಚಿನ ವರ್ಷಗಳಿಂದ ಒಂದು ವಿಚಿತ್ರ ರೀತಿಯ 'ಧನಲಕ್ಷ್ಮೀ' ಎಂಬ ಸಸ್ಯ ಪ್ರಬೇಧ ಹುಟ್ಟಿಕೊಳ್ಳುತ್ತಿದೆ. ಇದಕ್ಕೂ ಮೊದಲು ಕರಾವಳಿ ಪಶ್ಚಿಮಘಟ್ಟ ತಪ್ಪಲಲ್ಲಿ ಕಾಣಿಸಿಕೊಳ್ಳುತ್ತಿದ್ದ ಈ ಸಸ್ಯವು ಈಗ ಬಯಲು ನಾಡಿಗೂ ಕಾಲಿಟ್ಟಿದೆ. ಇದು ಮೇವಿನ ಸಸ್ಯಗಳನ್ನು ಕುಂಠಿತಗೊಳಿಸಿ ತಾನು ಮಾತ್ರ ಬಲಿಷ್ಠವಾಗಿ ಬೆಳೆಯುತ್ತಿದೆ.



ಅಪಾಯಕಾರಿ ಸಸ್ಯ ಕಂಡು ಬಂದಿರುವ ಪ್ರದೇಶಕ್ಕೆ ಭೇಟಿ ನೀಡಿ ಅದರ ಗುಣಲಕ್ಷಣ ಪರಿತೀಲಿಸಿ ಮೇಲಧಿಕಾರಿಗಳ ಗಮನಕ್ಕೆ ತರುವುದರ ಜತೆಗೆ ತಜ್ಞರ ಮಾರ್ಗದರ್ಶನದಂತೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗುವುದು.

। ಫಣೀಂದ್ರ ತೋಟಗಾರಿಕೆ ಸಹಾಯಕ ನಿರ್ದೇಶಕ, ಚನ್ನರಾಯಪಟ್ಟಣ

ಚನ್ನರಾಯಪಟ್ಟಣ ತಾಲೂಕಿನ ದಿಂಡಗೂರು, ಕಲ್ಕೆರೆ, ಜಂಬೂರು, ಕನುವನಘಟ್ಟ, ಉಳ್ಳಾವಳ್ಳಿ, ಮೆಳ್ಳಹಳ್ಳಿ, ಮುದಿಬೆಟ್ಟಕಾವಲು ಸೇರಿದಂತೆ ಬಹುತೇಕ ಗ್ರಾಮಗಳಲ್ಲಿ ಈ ಸಸ್ಯ ಕಾಣಿಸಿಕೊಂಡಿದೆ. ಇದರ ಬಗ್ಗೆ ರೈತರು ಈಗಷ್ಟೇ ಗಮನ ಹರಿಸುತ್ತಿದ್ದು, ಇದರ ವಿಚಿತ್ರ ಗುಣ ಕಂಡು ಬೆಚ್ಚಿ ಬಿದ್ದಿದ್ದಾರೆ. ಈ ಸಸ್ಯ ಕಾಣಿಸಿಕೊಂಡ ಪ್ರಾರಂಭದಲ್ಲಿ ರೈತರು ಒಳ್ಳೆಯ ಮೇವು ಇರಬಹುದು ಎಂದುಕೊಂಡಿದ್ದರು. ಆದರೆ ಜಮೀನನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡು ಸಮಸ್ಯೆ ತಂದೊಡ್ಡಿದ ಬಳಿಕ ಇದರ ನಿಜಬಣ್ಣ ಕಂಡು ಕಂಗಾಲಾಗಿದ್ದಾರೆ. ಎಲ್ಲೆಡೆ ವ್ಯಾಪಿಸುತ್ತಿರುವ ಸಸ್ಯದ ಹೆಸರು ನಿಖರವಾಗಿ ತಿಳಿದಿಲ್ಲದ ಕಾರಣ ಒಂದೊಂದು ಕಡೆ ಒಂದೊಂದು ರೀತಿ ಇದೆ. ಅಂದರೆ 'ಧನಲಕ್ಷ್ಮೀ', 'ಹಬ್ಬುಗೆ ಮಾಣಿ', 'ಹಳದಿ ಮುತ್ತಿನ ಸೊಪ್ಪು' ಇನ್ನಿತರ ಹೆಸರಿನಲ್ಲಿ ಗುರುತಿಸಲಾಗುತ್ತಿದೆ. ಈ ಸಸ್ಯ ಎಳೆಯದಾಗಿದ್ದ ವೇಳೆ ಒಂದಷ್ಟು ಸಮಯ ಮಾತ್ರ ಜಾನುವಾರುಗಳು ತಿನ್ನುತ್ತವೆ. ಸ್ವಲ್ಪ ಬಲಿತರೆ ಸಾಕು ಮೂಸಿಯೂ ನೋಡುವುದಿಲ್ಲ.

ಕಿತ್ತು ಎಸೆದರೂ ಮತ್ತೆ ಮತ್ತೆ ಚಿಗುರು: ಒಂದು ಜಾಗದಲ್ಲಿ ಈ ಸಸ್ಯ ಒಮ್ಮೆ ಹುಟ್ಟಿದರೆ ಸಾಕು, ಕೇವಲ 1 ರಿಂದ 2 ತಿಂಗಳಲ್ಲಿ ಸುಮಾರು 8 ರಿಂದ 10 ಅಡಿಯಷ್ಟು ಸುತ್ತಳತೆಯಲ್ಲಿ ಹರಡಿಕೊಳ್ಳುತ್ತದೆ. ವರ್ಷದಲ್ಲಿ 2 ಬಾರಿ ಹಳದಿ ಹೂವುಗಳೊಂದಿಗೆ ಆಕರ್ಷಣೀಯವಾಗಿ ಕಂಡರೂ, ಯಾವುದೇ ಉಪಯೋಗಕ್ಕೆ ಬರುವುದಿಲ್ಲ. ಅದೆಷ್ಟು ಬಾರಿ ಬೇರು ಸಮೇತ ಕಿತ್ತು ಎಸೆದರೂ ಮತ್ತೆ ಮತ್ತೆ ರಕ್ತ ಬೀಜಾಸುರನಂತೆ ಚಿಗುರೊಡೆದು ಹುಟ್ಟಿ ಬರುತ್ತಿರುವುದು ರೈತರ ನಿದ್ದೆ ಕೆಡಿಸಿದೆ. ಹಳದಿ ಹೂವು ಬಲಿತು ಬೀಜದಂತಾಗುವ ಜಾನುವಾರು ಇದನ್ನು ತಿಂದು ನಂತರ ಇಡುವ ಸಗಣಿಯನ್ನು ಉತ್ತಮ ಕೃಷಿ ಜಮೀನಿಗೆ ಹಾಕಿದರೆ ಸಾಕು, ಅಲ್ಲಿಯೂ ಈ ಸಸ್ಯ ಕಾಣಿಸಿಕೊಳ್ಳಲಿದೆ. ಹರಿಯುವ ನೀರಿನಲ್ಲಿ ಬಹುಬೇಗ ಹರಡುತ್ತದೆ ಎನ್ನಲಾಗಿದೆ. ಕಳೆನಾಶಕ ಸಿಂಪಡಿಸಿದರೂ ನಾಶವಾಗದೆ ಪುನಃ ಕಾಣಿಸಿಕೊಳ್ಳುತ್ತಿದೆ.

22-07-2022
Vv Pg 01

ಮಳೆಯಿಂದ ಬೆಳೆ ಹಾನಿ • ರೋಗದ ಕುರಿತು ಸಮೀಕ್ಷೆ ನಡೆಸಲು ಕೊಡಗು ಜಿಲ್ಲಾಧಿಕಾರಿ ಸೂಚನೆ

ಕಾಳುಮೆಣಸು, ಕಾಫಿಗೆ 'ಕೊಳೆ' ಸುಳಿ

• ಬಿ.ಜಿ.ಧನ್ಯಪ್ರಸಾದ್/ ಕೆ.ಎಸ್.ಗಿರೀಶ್/ ಚಿದಂಬರಪ್ರಸಾದ್

ಚಿಕ್ಕಮಗಳೂರು/ಕೊಡಗು/ಹಾಸನ: ಕೆಲವು ದಿನಗಳಿಂದ ನಿರಂತರವಾಗಿ ಸುರಿದ ಮಳೆ ಬೆಳೆಗಾರರಿಗೆ ಸಂಕಷ್ಟ ತಂದೊಡ್ಡಿದೆ. ಗಾಳಿ, ಮಳೆ ಹಾಗೂ ತೇವಾಂಶ ಹೆಚ್ಚಿದ್ದರಿಂದ ಕಾಫಿ, ಕಾಳುಮೆಣಸು, ಏಲಕ್ಕಿಗೆ ಕೊಳೆರೋಗ ತಗುಲಿದೆ.

ಗಿಡಗಳಲ್ಲಿ ಕಾಫಿ ಕಾಯಿಗಳು ಕಪ್ಪಾಗಿದ್ದು, ಉದುರುತ್ತಿವೆ. ಎಲೆಗಳು ಕಪ್ಪಾಗಿವೆ. ಕಾಳುಮೆಣಸಿನ ಬಳ್ಳಿಗಳ ತೊಟ್ಟುಗಳು (ಕಾಯಿಕಟ್ಟುವ ಜಾಗ) ಕಪ್ಪಾಗಿ ಉದುರಿವೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಚಿಕ್ಕಮಗಳೂರು, ಮೂಡಿಗೆರೆ, ಕಳಸ, ಕೊಪ್ಪ, ಎನ್.ಆರ್.ಪುರ, ಶೃಂಗೇರಿ, ತರೀಕೆರೆ (ಭಾಗಶಃ) ತಾಲೂಕುಗಳು, ಕೊಡಗು ಜಿಲ್ಲೆಯ ಮಡಿಕೇರಿ, ವಿರಾಜಪೇಟೆ, ಸೋಮವಾರ ಪೇಟೆ ತಾಲೂಕುಗಳು ಹಾಗೂ ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಕಸಬಾ, ಬಿಕ್ಕೋಡು, ಅರೇಹಳ್ಳಿ ಹೋಬಳಿ ಭಾಗದಲ್ಲಿ ಈ ಬೆಳೆಗಳನ್ನು ಬೆಳೆಯಲಾಗಿದೆ.

ಅರೇಬಿಕಾ ಮತ್ತು ರೋಬಸ್ಟ ತಳಿಗಳನ್ನು ಬೆಳೆಯಲಾಗಿದೆ. ಕಾಫಿಯ ಎರಡು ತಳಿಗಳಿಗೂ ರೋಗ ಬಾಧಿಸುತ್ತಿದೆ. ಚಿಕ್ಕಮಗಳೂರು ಜಿಲ್ಲೆ ಕಳಸ ಭಾಗದಲ್ಲಿ ಅಧಿಕ ಶೀತದ ಪರಿಣಾಮ ಬೇರಿಗೆ ಅಮ್ಮುಜನಕದ ಕೊರತೆಯಾಗಿ ಕಾಫಿ ಹಸಿರುಕಾಯಿ ಉದುರುವ 'ವೆಟ್ ಫೀಟ್' ಕೂಡಾ ಬಾಧಿಸುತ್ತಿದೆ.

ಕೊಡಗು ಜಿಲ್ಲೆಯ ತೋಟಗಳಲ್ಲಿ ಕಾಫಿ ಕಾಯಿಗಳು ಅಪಾರ ಪ್ರಮಾಣದಲ್ಲಿ ಉದುರಿವೆ. ಸಾಪ್ಕೋಕ್ಕು ಹೋಬಳಿಯ ಕಕ್ಕಬೆ, ಕುಂಬೆಲ, ಪಾಲಿಬೆ, ಮರಂದೋಡ, ಮದೆನಾಡು, ಜೋಡುಪಾಲ ಮತ್ತಿತರ ಭಾಗಗಳಲ್ಲಿ ಕೊಳೆರೋಗ ಉಲ್ಬಣಿಸಿದೆ. ಶ್ರೀಮಂಗಲ, ಶನಿವಾರಸಂತೆ ಭಾಗಗಳಿಗೂ ವ್ಯಾಪಿಸಿದೆ.

ಗಿಡಗಳಿಂದ ಗೊಂಚಲು ಗೊಂಚಲಾಗಿ ಕಾಫಿಕಾಯಿಗಳು ಉದುರುತ್ತಿವೆ. ಗಿಡಗಳ ರೆಂಬೆಗಳಲ್ಲಿ ಕಾಫಿ ಕಾಯಿಗಳು ಕಪ್ಪಾಗಿ ಕೊಳೆಯುತ್ತಿವೆ. ಮಳೆ ಮುಂದುವರಿದರೆ ಮುಂದಿನ ವರ್ಷ ಇಳುವರಿಯೇ ಕೈತಪ್ಪುವ ಸಾಧ್ಯತೆ ಇದೆ ಎಂದು ಬೆಳೆಗಾರರು ಕಳವಳಗೊಂಡಿದ್ದಾರೆ.



ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕು ಕುಂಚಿಕ್ಕಲ್ ಗ್ರಾಮದ ತೋಟದಲ್ಲಿ ಕೊಳೆ ರೋಗ ತಗುಲಿ ಕಾಫಿ ಕಾಯಿಗಳು, ಎಲೆಗಳು ಕಪ್ಪಾಗಿರುವುದು

ಮಳೆ
ಕಥೆ- ವ್ಯಥೆ

ಪ್ರಾಥಮಿಕ - ಸಮೀಕ್ಷೆ: ನಿರಂತರವಾಗಿ ಬೀಳುತ್ತಿರುವ ಮಳೆಯಿಂದ ಕಾಫಿಗೆ ಬಂದಿರುವ ಕೊಳೆರೋಗದ ಕುರಿತು ಸಮೀಕ್ಷೆ ನಡೆಸುವಂತೆ ಕೊಡಗು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ್ ಸೂಚನೆ ನೀಡಿದ್ದಾರೆ. ಚಟ್ಟಳ್ಳಿಯ ಕಾಫಿ ಸಂಶೋಧನಾ ಉಪಕೇಂದ್ರದ ವಿಜ್ಞಾನಿಗಳಾದ ಬಾ.ರಾಜೀವ್ ಪಾಟಿ, ಮುಖಾರಿಬ್, ಗೋಣಿಕೊಪ್ಪಲಿನ ಕಾಫಿ ಮಂಡಳಿಯ ಉಪನಿರ್ದೇಶಕ ಡಾ.ಶ್ರೀದೇವಿ ಅವರು ಹುದಿಕೇರಿ, ಬೇಲೂರು, ಹೆಸೂಡೂರು, ಪೆರಾಡು, ಪರ್ಕಟಗೇರಿ, ಬಿರುವಾಣಿ, ಬಾಡಗಕೇರಿ, ಕುರ್ಚಿ, ಬೀರುಗ, ಟಿ.ಶೆಟ್ಟಗೇರಿ, ತಾವಲಗೇರಿ, ಹರಿಹರ ಇತರ ಗ್ರಾಮಗಳ ತೋಟಗಳಲ್ಲಿ ಸಮೀಕ್ಷೆ ನಡೆಸಿದ್ದಾರೆ. ಕಾಫಿಗೆ ಕೊಳೆರೋಗ ಹರಡುತ್ತಿದೆ ಎಂಬುದನ್ನು ದೃಢಪಡಿಸಿದ್ದಾರೆ.

'ಸದ್ಯ, ಪ್ರಾಥಮಿಕ ಸಮೀಕ್ಷೆ ನಡೆಸಲಾಗಿದೆ. ಮುಂಬರುವ ದಿನಗಳಲ್ಲಿ ಕೃಷಿ, ತೋಟಗಾರಿಕೆ, ಕಂದಾಯ, ಕಾಫಿ ಮಂಡಳಿಯಿಂದ ಜಂಟಿ ಸಮೀಕ್ಷೆ ನಡೆಸಲಾಗುವುದು. ಆಗಷ್ಟೇ ನಷ್ಟದ ಅಂದಾಜು

ಕೊಳೆ ರೋಗದಿಂದ ಕಾಫಿ ಬೆಳೆ, ಕಾಳು ಮೆಣಸು ಶೇ 25 ರಷ್ಟು ನಾಶವಾಗಿದೆ. ಈ ವರ್ಷ ಕಾಫಿ ಬೆಲೆ ಸ್ವಲ್ಪ ಏರುಗತಿಯಲ್ಲಿದೆ. ಫಸಲು ನಷ್ಟದಿಂದ ನಿರೀಕ್ಷೆಗೆಗಳು ಕಮರಿವೆ
ಬಿ.ಎಸ್.ಜೈರಾಂ
ಬೆಳೆಗಾರ ಬಿದರಹಳ್ಳಿ, ಮೂಡಿಗೆರೆ ತಾಲ್ಲೂಕು

ಅತಿಯಾದ ಮಳೆಯಿಂದ ಕಾಫಿ, ಕಾಳು ಮೆಣಸು, ಏಲಕ್ಕಿ ಇತರ ವಾಣಿಜ್ಯ ಬೆಳೆಗಳು ಕರಗಿ ಉದುರುತ್ತಿದೆ. ಕೇಂದ್ರ, ರಾಜ್ಯ ಸರ್ಕಾರ ಬೆಳೆಗಾರರ ಸಂಕಷ್ಟಕ್ಕೆ ಸ್ಪಂದಿಸಬೇಕು ಜಾಗೃಷಣ ಎಚ್.ಇ.
ನಿರ್ದೇಶಕ, ಕರ್ನಾಟಕ ಬೆಳೆಗಾರರ ಒಕ್ಕೂಟ, ಹಾಸನ

ಮಳೆಯಿಂದ ಕಾಫಿ ಬೆಳೆಯಮ್ಮ ರಕ್ಷಿಸುವುದು ಸವಾಲಿನ ಕೆಲಸವಾಗಿದೆ. ಆದ್ದರಿಂದ ಕಾಫಿ ಬೆಳೆಯಮ್ಮ ಹವಾಮಾನ ಆಧಾರಿತ ಬೆಳೆ ವಿಮಾ ವ್ಯಾಪ್ತಿಗೆ ಸೇರಿಸಬೇಕು ಸಚ್ಚಿನ್ ಎಂ.ಜೆ
ಬೆಳೆಗಾರ ಸಂಘದ ಅಧ್ಯಕ್ಷ, ಹೆತ್ತೂರು

ಹಾಸನ ಜಿಲ್ಲೆಯ ಸಕಲೇಶಪುರ, ಆಲೂರು, ಬೇಲೂರು ತಾಲ್ಲೂಕುಗಳಲ್ಲಿ ಮಳೆಯಿಂದ ₹462 ಕೋಟಿ ಮೌಲ್ಯದ ಕಾಫಿ ಬೆಳೆಗೆ ಹಾನಿಯಾಗಿದೆ
ಕ್ಯಾನಹಳ್ಳಿ ಸುಬ್ರಹ್ಮಣ್ಯ
ಹಾಸನ ಜಿಲ್ಲಾ ಪ್ಲಾಂಟರ್ಸ್ ಸಂಘದ ಅಧ್ಯಕ್ಷ

ಅರ್ಧದಷ್ಟು ಫಸಲು ಕೈತಪ್ಪುವ ಭೀತಿ

ಹಾಸನ ಜಿಲ್ಲೆಯಲ್ಲಿ ಕಾಫಿ ಮತ್ತು ಮೆಣಸಿನಲ್ಲಿ ಶೇ 20ರಿಂದ ಶೇ 50 ರಷ್ಟು ಫಸಲು ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಬೆಳೆಗಾರರು ಆತಂಕಕ್ಕೆ ಒಳಗಾಗಿದ್ದಾರೆ.

ಸಿಗಲು ಸಾಧ್ಯ' ಎಂದು ಗೋಣಿಕೊಪ್ಪಲಿನ ಕಾಫಿ ಮಂಡಳಿಯ ಉಪನಿರ್ದೇಶಕ ಡಾ.ಶ್ರೀದೇವಿ 'ಪ್ರಜಾವಾಣಿ'ಗೆ ತಿಳಿಸಿದರು.

ಕಾಳುಮೆಣಸೂ ಅಪಾಯದಲ್ಲಿ: ಕಾಳುಮೆಣಸೂ ಅಪಾಯಕ್ಕೆ ಸಿಲುಕಿದೆ. ಕೆಲವೆಡೆ ಬಳ್ಳಿಯಲ್ಲಿ ಹೂ ಬಂದಿದೆ. ಮಳೆ ನಿಲ್ಲದೇ ಹೋದರೆ ಹೂಬಿಡುವ ಸಾಧ್ಯತೆ ಕಡಿಮೆ. ಮಳೆ- ಗಾಳಿಗೆ ನೂರಾರು ಮರಗಳು ಬುಡಮೇಲಾಗಿವೆ. ಮರದಲ್ಲಿ ಹಬ್ಬಿಸಿದ ಕಾಳುಮೆಣಸಿನ ಬಳ್ಳಿಗಳೂ ನೆಲಕಚ್ಚಿವೆ.

'ನಷ್ಟದ ಅಂದಾಜು ಮಾಡಿಲ್ಲ. ಸದ್ಯ, ಜಿಲ್ಲೆಯ ಕಾಫಿ, ಅಡಿಕೆ ಬೆಳೆಗಳಲ್ಲಿ ಶೇ 10ರಷ್ಟು ಕೊಳೆರೋಗ ವ್ಯಾಪಿಸಿದೆ. ಶೇ 5ರಿಂದ 10ರಷ್ಟು ಕಾಳುಮೆಣಸಿನ ಬಳ್ಳಿಗಳೂ ಬಾಧಿತವಾಗಿವೆ. ಮಳೆ ಹೀಗೆ ಮುಂದುವರಿದರೆ ಏಲಕ್ಕಿಗೂ ಬುಡಕೊಳೆರೋಗ ಬರುವ ಸಾಧ್ಯತೆ ಇದೆ' ಎಂದು ಕೊಡಗಿನ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಪ್ರಮೋದ್ ಅವರು ತಿಳಿಸಿದರು.

ನಾಪೋಕ್ಲುವಿನ ಕಾಫಿ ಬೆಳೆಗಾರ ಎಸ್. ಉದಯಶಂಕರ, 'ನಿರಂತರ ಮಳೆ, ಚಳಿ ಎರಡೂ ಸೇರಿ ಕಾಫಿಗಿಡಗಳಿಗೆ ಮಾರಕವಾಗಿದೆ. ಎಲೆ, ಕಾಫಿ ಕಾಯಿ ಉದುರುವುದು ಆರಂಭವಾಗಿದೆ. ಐದಾರು ವರ್ಷಗಳಿಂದ ಈ ಸಮಸ್ಯೆ ಕಾಡುತ್ತಿದೆ' ಎಂದರು.

ಬೆಳೆಯುವ ಪ್ರದೇಶ

ಕಾಫಿ	
ಚಿಕ್ಕಮಗಳೂರು	90 ಸಾವಿರ ಹೆಕ್ಟೇರ್
ಕೊಡಗು	1.07 ಲಕ್ಷ ಹೆಕ್ಟೇರ್
ಹಾಸನ	41 ಸಾವಿರ ಹೆಕ್ಟೇರ್
ಕಾಳುಮೆಣಸು	
ಚಿಕ್ಕಮಗಳೂರು	55 ಸಾವಿರ ಹೆಕ್ಟೇರ್
ಕೊಡಗು	16 ಸಾವಿರ ಹೆಕ್ಟೇರ್
ಹಾಸನ	8 ಸಾವಿರ ಹೆಕ್ಟೇರ್
ಏಲಕ್ಕಿ	
ಚಿಕ್ಕಮಗಳೂರು	500 ಹೆಕ್ಟೇರ್
ಕೊಡಗು	8 ಸಾವಿರ ಹೆಕ್ಟೇರ್
ಹಾಸನ	5 ಸಾವಿರ ಹೆಕ್ಟೇರ್

22-07-2022
Pv Pg 05

ಕೃಷಿ ಪರಿಹಾರಕ್ಕೆ ಹೊಸ ಆ್ಯಪ್

ಬೆಂಗಳೂರು: ಬಿಗ್‌ಹತ್ ಭಾರತದ ಅತಿದೊಡ್ಡ ಡಿಜಿಟಲ್ ಅಗ್ರಿ ಪ್ಲಾಟ್‌ಫಾರ್ಮ್ ಆಗಿದ್ದು ಎಂಡ್ ಟು ಎಂಡ್ ಕೃಷಿ ಪರಿಹಾರಗಳನ್ನು ಒದಗಿಸುವ ಹೊಸ ಆ್ಯಪ್‌ಅನ್ನು ಬಿಡುಗಡೆ ಮಾಡುವ ಮೂಲಕ ರೈತರಿಗೆ ಸಹಕಾರಿಯಾಗುವ ಕೆಲಸ ಮಾಡುತ್ತಿದೆ ಎಂದು ಕೃಷಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಶಿವಯೋಗಿ ಸಿ ಕಳಸದ್ ತಿಳಿಸಿದರು.



ಕರ್ನಾಟಕದ ರೈತ ಸಮುದಾಯವನ್ನು ಸಬಲೀಕರಣಗೊಳಿಸಲು ಕನ್ನಡದಲ್ಲಿ ಮೊಬೈಲ್ ಆ್ಯಪ್ ಬಿಗ್‌ಹತ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಕೃಷಿಯು 13 ದಶಲಕ್ಷಕ್ಕೂ ಹೆಚ್ಚು ರೈತರಿಗೆ ಜೀವನೋಪಾಯವನ್ನು ಒದಗಿಸುತ್ತದೆ. ರಾಜ್ಯದಲ್ಲಿ ಒಟ್ಟು 114.54 ಲಕ್ಷ ಹೆಕ್ಟೇರ್ ಭೂಮಿಯನ್ನು ಸಾಗುವಳಿ ಮಾಡಲು ಲಭ್ಯವಿದೆ. ಇದು ರಾಜ್ಯದ ಒಟ್ಟು ಭೌಗೋಳಿಕ ಪ್ರದೇಶದ ಶೇ. 64.6ರಷ್ಟಿದೆ. ಕನ್ನಡದಲ್ಲಿ ಬಿಡುಗಡೆಯಾಗಿರುವ ಬಿಗ್ ಹಾತ್ ಆ್ಯಪ್ ನಿಂದಗಿ ರೈತರಿಗೆ ಕೃಷಿ ಮಾಡಲು ಇನ್ನೂ ಹೆಚ್ಚಿನ ಬೆಳವಣಿಗೆ ಕಾಣಲು ಸಹಾಯ ಆಗಬಹುದು ಎಂದರು.

ಬಿಗ್‌ಹಾತ್ ಸಿಇಒ ಸತೀಶ ನೂಕಾಲ ಉಪಸ್ಥಿತರಿದ್ದರು.

22-07-2022
Hd Pg 12